ಈ) ರೋಗಗ್ರಸ್ಥ ಘಟಕವೆಂದು ಘೋಷಣೆ ಮಾಡಲು ಈ ಕೆಳಕಂಡ ಮಾನದಂಡ ಇರುತ್ತದೆ:–

ಅ) ಆರ್.ಬಿ.ಐ. ಮಾರ್ಗಸೂಚಿ ದಿನಾಂಕ: 16–1–2002 ರನ್ವಯ ಯಾವುದೇ ಘಟಕ ಪಡೆದಿರುವ ಸಾಲದ ಮೊತ್ತವು ಆರು ತಿಂಗಳಿಗಿಂತ ಹೆಚ್ಚುವರಿಯಾಗಿ ಅಸಲು ಅಥವಾ ಬಡ್ಡಿ ಪಾವತಿಸದೇ ಇದ್ದಲ್ಲಿ

ಅಥವಾ

ಆ) ಹಿಂದಿನ ವರ್ಷದಲ್ಲಿ ಸಂಚಿತ ಹಣದ ನಷ್ಟವು ಶೇ.50ಕ್ಕಿಂತ ಹೆಚ್ಚಾಗಿ ನೆಟ್ ವರ್ತ್ ಎರೋಜನ್ ಆಗಿದ್ದಲ್ಲಿ

ಮತ್ತು

ಇ) ಘಟಕವು ತನ್ನ ವಾಣಿಜ್ಯ ಉತ್ಪಾದನೆ ಪ್ರಾರಂಭಿಸಿ 2 ವರ್ಷಗಳಾಗಿದ್ದಲ್ಲಿ ಅಂತಹ ಘಟಕವು ರೋಗಗ್ರಸ್ಥ ಘಟಕವೆಂದು ಘೋಷಿಸಬಹುದಾಗಿರುತ್ತದೆ.

1042 ಶ್ರೀ ಹ್ಯಾರಿಸ್ ಎನ್.ಎ : ಮಾನ್ಯ ಸಣ್ಣ ಕೈಗಾರಿಕೆಗಳು ಮತ್ತು ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಸಣ್ಣ ಕೈಗಾರಿಕೆಗಳು ಅಭಿವೃದ್ಧಿ ಹೊಂದಲು ಸರ್ಕಾರ ಜಾರಿಗೊಳಿಸಿರುವ ಯೋಜನೆಗಳು ಯಾವುವು?

ಆ) ಜಾಗತಿಕ ಆರ್ಥಿಕ ಕುಸಿತದ ಪರಿಣಾಮವನ್ನು ಎದುರಿಸಲು ಸಣ್ಣ ಕೈಗಾರಿಕೆಗಳಿಗೆ ಸರ್ಕಾರದ ಪ್ರೋತ್ಸಾಹಕ ಕ್ರಮಗಳೇನು?

ಇ) 2008–09ನೇ ಆರ್ಥಿಕ ವರ್ಷದಲ್ಲಿ ಮುಚ್ಚಲ್ಪಟ್ಟ ಸಣ್ಣ ಕೈಗಾರಿಕಾ ಘಟಕಗಳ ಸಂಖ್ಯೆ ಎಷ್ಟು? (ವಿವರ ನೀಡುವುದು);

ಶ್ರೀ ವೆಂಕಟರಮಣಪ್ಪ (ಸಣ್ಣ ಕೈಗಾರಿಕೆಗಳು ಮತ್ತು ರೇಷ್ಮೆ ಸಚಿವರು) :

ಅ) ಕರ್ನಾಟಕ ರಾಜ್ಯ ಸರ್ಕಾರವು ಹೊಸ ಕೈಗಾರಿಕಾ ನೀತಿ 2009–14ರ ಪ್ರಕಾರ ಹಿಂದುಳಿದ, ಅತೀ ಹಿಂದುಳಿದ, ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಅತೀ ಸಣ್ಣ ಮತ್ತು ಸಣ್ಣ ಕೈಗಾರಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ಘೋಷಿಸಲಾಗಿದೆ. ಅದರಲ್ಲಿ ಮುಖ್ಯವಾಗಿ ಹೊಸದಾಗಿ ಸ್ಥಾಪಿಸಲಾದ ಕೈಗಾರಿಕೆಗಳಿಗೆ ಸಹಾಯಧನವನ್ನು ಶೇ.10 ರಿಂದ 20ರವರೆಗೂ ಗರಿಷ್ಠ ರೂ.20.00 ಲಕ್ಷಗಳನ್ನು ಮಂಜೂರಾತಿ ಮಾಡುವುದು, ಮುದ್ರಾಂಕ ಶುಲ್ಕ ವಿನಾಯಿತಿ ಹಾಗೂ ಪ್ರವೇಶ ತೆರಿಗೆ ವಿನಾಯಿತಿ ಮತ್ತು ಇತರೆ ಸೌಲಭ್ಯ ಒದಗಿಸಲಾಗಿದೆ.

ಆ) ಕೇಂದ್ರ ಸರ್ಕಾರವು ಭಾರತೀಯ ರಿಜರ್ವ್ ಬ್ಯಾಂಕ್ ಮುಖಾಂತರ ಆರ್ಥಿಕ ಹಿನ್ನೆಡೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಅತೀ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಲು ಸಮಗ್ರ ಪ್ರಸ್ತಾವನೆ ಘೋಷಿಸಿದ್ದು ಇದರನ್ವಯ ರಾಜ್ಯ ಸರ್ಕಾರ ಮತ್ತು ಕೈಗಾರಿಕೆ ಸಂಘ/ಸಂಸ್ಥೆಗಳು ಭಾರತೀಯ ರಿಜರ್ವ್ ಬ್ಯಾಂಕ್, ಬೆಂಗಳೂರು ಶಾಖೆಯೊಂದಿಗೆ ಸಮನ್ವಯ ಸಾಧಿಸಿ ರಾಷ್ಟ್ರೀಕೃತ ಬ್ಯಾಂಕ್‌ಗಳ ಮುಖಾಂತರ ಸಂಕಷ್ಟದಲ್ಲಿರುವ ಕೈಗಾರಿಕೆಗಳಿಗೆ ಅವಧಿಸಾಲ/ದುಡಿಮೆ ಬಂಡವಾಳ ಖಾತೆಗಳನ್ನು ಪುನರ್ ರಚನೆ ಮಾಡಲಾಗುತ್ತಿದೆ. ಇದುವರೆಗೂ ರಾಜ್ಯದಲ್ಲಿನ ಸುಮಾರು 27069 ಕೈಗಾರಿಕೆಗಳನ್ನು ಗುರುತಿಸಲಾಗಿದ್ದು, ಇದರಲ್ಲಿ 25699 ಕೈಗಾರಿಕೆಗಳು ಈ ಕಾರ್ಯಕ್ರಮದ ಪ್ರಯೋಜನ ಪಡೆದಿರುತ್ತವೆ.

ಇ) ರಾಜ್ಯದಲ್ಲಿ ದಿನಾಂಕ: 31-3-2009ರವರೆಗೂ ಅತೀ ಸಣ್ಣ ಮತ್ತು ಸಣ್ಣ 44621 ಕೈಗಾರಿಕಾ ಘಟಕಗಳು ಮುಚ್ಚಿರುತ್ತದೆ. ಜಿಲ್ಲಾವಾರು ವಿವರ ಒದಗಿಸಲಾಗಿದೆ.

ಜಿಲ್ಲಾವಾರು ಸಣ್ಣ ಕೈಗಾರಿಕೆಗಳು ನೋಂದಣಿ ಹಾಗೂ ಮುಚ್ಚಿರುವ ಘಟಕಗಳ ವಿವರ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಒಟ್ಟು ನೋಂದಣಿ	ಒಟ್ಟು ಮುಚ್ಚಿರುವ ಘಟಕಗಳ ಸಂಖ್ಯೆ
1	ಬೆಂಗಳೂರು (ನಗರ)	64786	13233
2	ಬೆಂಗಳೂರು(ಗ್ರಾಮಾಂತರ)	16743	30
3	ಬಾಗಲಕೋಟೆ	7363	703
4	ಬೀದರ್	7588	940
5	ಬೆಳಗಾವಿ	32201	3762
6	ಬಿಜಾಪುರ	8137	721
7	ಬಳ್ಳಾರಿ	14974	1651
8	ಚಾಮರಾಜನಗರ	7883	2960
9	ಚಿಕ್ಕಮಗಳೂರು	7685	805